**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 92/2018**

| | | |
|---|---|---|
| ಸಾಕ್ಷಿಯ ಹೆಸರುಃ | ರಾಜು | ಪ್ರಾಸಾಃ 5 |
| ಗಂಡನ/ತಂದೆಯ ಹೆಸರುಃ | ಟೊಪಸಿಂಗ | ಚಾಸಾಃ 6 |
| ವಯಸ್ಸುಃ | 22 ವರ್ಷ | ದಿಃ 23-11-2023 |
| ಉದ್ಯೋಗಃ | ವ್ಯಾಪಾರ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಉಮ್ಲಾ ನಾಯಕ ತಾಂಡಾ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾಃ 1, 4, 5 ರವರು ಹಾಗೂ ಆರೋಪಿತನ ಪರಿಚಯವಿದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

ದಿನಾಂಕಃ 19-10-2017 ರಂದು ಬೆಳಿಗ್ಗೆ 7.00 ಗಂಟೆ ಸುಮಾರಿಗೆ ನಾನು ಮತ್ತು ಚಾಸಾಃ 5 ರವರು ವೆಂಕಟೇಶ ಮನೆಯ ಮುಂದೆ ಕುಳಿತಿದ್ದೇವು ಎಂದರೆ ಸರಿಯಲ್ಲ. ಆರೋಪಿತನು ಜಗಳ ಮಾಡಿರುವುದನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ಕೊಡಲಿ ಹಿಡಿದುಕೊಂಡು ಬಂದು ಚಾಸಾಃ 4 ರವರಿಗೆ ನನ್ನ ಹೆಂಡತಿಯ ಜೊತೆ ಸಲುಗೆಯಿಂದ ಮಾತನಾಡಬೇಡ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾಸಾಃ 1 ಮತ್ತು 4 ರವರು ಬಗಿಲು ಹಾಕಿಕೊಂಡಾಗ ಆರೋಪಿತನು ಕೊಡಲಿಯಿಂದ ಬಾಗಿಲಿಗೆ ಹೊಡೆದು ಹಾನಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾಃ 4 ರವರಿಗೆ ಆರೋಪಿತನು ಅಂಗಿ ಹಿಡಿದು, ಕಪಾಳಕ್ಕೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಚಾಸಾಃ 1 ರವರಿಗೆ ಆರೋಪಿತನು ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾನೆ ಎಂದರೆ ಸರಿಯಲ್ಲ, ಆಗ ನಾನು ಮತ್ತು ಚಾಸಾಃ 5 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದರೆ

ಸರಿಯಲ್ಲ,  ಈಗ ನಿಪಿ-3 ರಂತೆ ವಿವರವಾಗಿ ಓದಿ ಹೇಳಲಾದ ಹೆಳಿಕೆಯನ್ನು ಪೊಲಿಸರ ಮುಂದೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ःಆರೋಪಿ ಪರ ಶ್ರೀ. ಜಿ.ಬಿ.ಎನ್. ವಕೀಲರಿಂದ**

**ಮರುವಿಚಾರಣೆ ः ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**